# ಕೋಡಂಗಿಯ ಕಥನ

ಕಾವ್ಯ, ನಾಟಕ, ಕಥನ– ಈ ಮೂರೂ ಪ್ರಕಾರಗಳಲ್ಲಿ ಯಶಸ್ಸನ್ನು ಪಡೆದ ಕನ್ನಡದ ಪ್ರತಿಭೆ ಚಂದ್ರಶೇಖರ ಕಂಬಾರ. ವಿಶೇಷವಾಗಿ ಕಂಬಾರರ ಕಾವ್ಯದ ಲಯ, ಬದುಕಿನ ಸಮೃದ್ಧಿ, ಪ್ರೇಮವನ್ನು ಮೀರಿ ವಿಜೃಂಭಿಸುವ ಕಾಮ, ಜೀವ–ಸಾವುಗಳ ನಡುವಿನ ಹೋರಾಟ. ಅಸಲಿ ನಕಲಿಯಾಗುವ, ನಕಲಿ ಅಸಲಿಯಾಗುವ ಅದಲು ಬದಲಿನ ಆಟ. ಈ ಸಂಗತಿಗಳು ಗಮನ ಸೆಳೆಯುತ್ತವೆ. ಇಂತಹ ಅಸಲಿ–ನಕಲಿ ಆಟದಲ್ಲಿ ಸತ್ಯದ ನೆರಳು ಸುಳ್ಳೋ, ಸುಳ್ಳಿನ ನೆರಳು ಸತ್ಯವೋ ಎಂಬ ಪ್ರಶ್ನೆ ಸಾಮಾನ್ಯವಾಗಿರುತ್ತದೆ. ಕಂಬಾರರ 'ನಾಟಕದ ರಾಜನೂ ಕೋಡಂಗಿಯೂ' ಎಂಬ ಕವಿತೆಯಲ್ಲಿ ನಟ, ನಿರ್ದೇಶಕ, ಪ್ರೇಕ್ಷಕ ಹಾಗೂ ನೇಪಥ್ಯ ಕುರಿತಂತೆ ಕೆಲ ಸಾಲುಗಳು ಹೀಗಿವೆ.

ಈಗ ಎಲ್ಲ ಮಲಗಿದ್ದಾರೆ/ ನಟರು ಅವರ ಭ್ರಮೆಗಳು/ ನೇಪಥ್ಯದ ಕೆಲಸಗಾರರು ಅವರ ಹೆಂಡಿರು ಮಕ್ಕಳು/ ನಿರ್ದೇಶಕ ಮತ್ತವನ ಅಹಂಕಾರ/ ಪ್ರೇಕ್ಷಕ ಮತ್ತವರ ಜೌಗುದಾರಿಗಳು/ ವಾಚ್‌ಮನ್ ಮತ್ತವನ ಸುಖ ಸಂಸಾರ.

ಈ ಕವಿತೆಯಲ್ಲಿ ರಂಗದ ಮೇಲೆ ಎರಡೇ ಪಾತ್ರ ಬರುತ್ತವೆ. ಕೋಡಂಗಿ ಮತ್ತು ರಾಜ. ನಾಟಕದಲ್ಲಿ ಕೋಡಂಗಿ (ವಿದೂಷಕ) ಪಾತ್ರ ಇರುವುದು ನಡು ನಡುವೆ ವೇದಿಕೆಯ ಮೇಲೆ ಚಿತ್ರವಿಚಿತ್ರ ವೇಷಗಳನ್ನು ಧರಿಸಿ ಪ್ರೇಕ್ಷಕರನ್ನು ರಂಜಿಸುವುದಕ್ಕಾಗಿ ಮಾತ್ರ. ಮುಂದೆ ನಡೆಯಲಿರುವ ಕತೆಗೂ ಹಿಂದಿನ ಕತೆಗೂ ಜೋಡಿಸುವುದಕ್ಕಾಗಿ ಮಾತ್ರ. ತನ್ನನ್ನು ತಾನು ಗೇಲಿ ಮಾಡಿಕೊಳ್ಳುತ್ತಲೇ ಅಸಹಾಯಕತೆಯೊಂದಿಗೆ ವಿಷಾದ ಉಕ್ಕಿಸುವುದಕ್ಕಾಗಿ ಮಾತ್ರ. ಒಟ್ಟಿನಲ್ಲಿ ಕೋಡಂಗಿಯೆಂದರೆ ಅಸ್ತಿತ್ವವೇ ಇಲ್ಲದ ಮೂಲಕತೆಯ ಗಂಭೀರ ಚೌಕಟ್ಟಿಗೆ ಹೊಂದದ ಹಗುರ ವ್ಯಕ್ತಿತ್ವದ ವ್ಯಕ್ತಿಯಾಗಿರುತ್ತಾನೆ. ಆದರೆ ಈ ಕವಿತೆಯ ಕೋಡಂಗಿ ರಾಜನ ವ್ಯಕ್ತಿತ್ವವನ್ನು ಧಾರಣೆ ಮಾಡಿಕೊಂಡವನು. ಅವನು ತನ್ನ ವೇಷಭೂಷಣ, ತನ್ನ ಕುಚೇಷ್ಟೆಯ ನಡವಳಿಕೆಗಳನ್ನು ಪಕ್ಕಕ್ಕೆ ಇಡುತ್ತಾನೆ. ತನ್ನನ್ನು ಕೋಡಂಗಿಯನ್ನಾಗಿ ಗಮನಿಸುತ್ತಿದ್ದರೂ ರಾಜ ಗಾಂಭೀರ್ಯದ ನಡೆ ನುಡಿಗಳಿಂದ ಜನರನ್ನು ಆವರಿಸಿಕೊಳ್ಳುತ್ತಾನೆ. ತನ್ನ ನುಡಿಗಳಿಗೇ ರಾಜನ ವೇಷ ತೊಡಿಸುತ್ತಾನೆ. ಕೋಡಂಗಿಯ ಹೂಂಕಾರಕ್ಕೆ ಅರಸನ ಅಹಂಕಾರವನ್ನು ಲೇಪಿಸುತ್ತಾನೆ. ಅವನು ಅಕ್ಷರಕ್ಷರಕ್ಕೆ ಹರಳು ಕಲ್ಲಿನ ಬೆಲೆ ತುಂಬಿದ. ಪದ ಪದಕ್ಕೆ ಅಧಿಕಾರದ ಮದ ತುಂಬಿದ. ಕ್ರಮೇಣ ಜನ ಅವನನ್ನು ಅರಸನನ್ನಾಗಿ ಕಂಡರು, ಒಪ್ಪಿಕೊಂಡರು. ಈಗ ಆ ಜಾಣ ಕೋಡಂಗಿ ವಿಂಗಿನಿಂದ ತಲೆ ಹೊರ ಹಾಕಿದ ನಿಜವಾದ ಅರಸನನ್ನು ತೋರಿ 'ಅಗೋ ಕೋಡಂಗಿ ನೋಡಿ ನಗಿರಿ' ಎಂದು ಅವನನ್ನು ಕೋಡಂಗಿಯಾಗಿಸಿದ. ತಮಾಷೆಯೆಂದರೆ ಅವನ ಹಾವಭಾವಕ್ಕೆ ಮನಸೋತ ಹನ್ನೆರಡು ಜನ ಬುದ್ಧಿವಂತರಂಥ ಪ್ರೇಕ್ಷಕರು ನಗುವುದಕ್ಕೆ ಆರಂಭಿಸಿದರು. ಅಷ್ಟಕ್ಕೆ ಸುಮ್ಮನಾಗದೆ 'ನಿಮ್ಮ ಮಹಾರಾಜ ನಾನು ಹೊರಟಿದ್ದೇನೆ' ಬೀಳ್ಕೊಡಿ ಎಂದ. ಜನ ನಿಜವಾಗಿಯೂ ನಿಂತು ಬೀಳ್ಕೊಟ್ಟರು. ಹೀಗೆ 'ಅದಲು ಬದಲು, ಕಂಚಿ ಕದಲು' ವಿನಂತಹ ಆಟ ಆಡಿದ ಕೋಡಂಗಿ ಅಲ್ಲಿಂದ ನಿರ್ಗಮಿಸಿದ.

ಕವಿತೆಯ ಎರಡನೇ ಭಾಗದಲ್ಲಿ ನಿಜವಾದ ರಾಜ ರಾಜಗಾಂಭೀರ್ಯದಿಂದ ಹೊರಗೆ ಬರುತ್ತಾನೆ. ಆದರೆ ಜನ ಅವನನ್ನು, ಅವನ ರಾಜಗಾಂಭೀರ್ಯವನ್ನು ಲೆಕ್ಕಿಸುವುದೇ ಇಲ್ಲ. ಬದಲಾಗಿ ಅವನನ್ನು ಎಡಬಿಡಂಗಿಯೆಂದು ತಮಾಷೆ ಮಾಡುತ್ತಾರೆ. ಕಮಂಗಿಯೆಂದು ನಗುತ್ತಾರೆ. ಈ ಭಾಗದಲ್ಲಿ ಕೋಡಂಗಿಯ ಸಮ್ಮೋಹನಕ್ಕೆ ಒಳಗಾದ ಪ್ರೇಕ್ಷಕರು ಅರಸನನ್ನು ಕೋಡಂಗಿಯಾಗಿಯೇ ಕಾಣ ತೊಡಗಿದ್ದಾರೆ.

ಇಡೀ ಕವಿತೆಯ ಕೇಂದ್ರದಲ್ಲಿರುವುದು ಆಳುವ ವ್ಯವಸ್ಥೆಯ ಬಗೆಗಿನ ಲೇವಡಿ ಮತ್ತು ವ್ಯಂಗ್ಯ. ಇದು 1993ರಲ್ಲಿ ಬರೆದ ಕವಿತೆಯಾದರೂ ಕೋಡಂಗಿಯಂಥ ಸಮಯ ಸಾಧಕರು ಸ್ವಲ್ಪವೇ ಅವಕಾಶ, ಅಧಿಕಾರ ದೊರೆತರೂ, ಆಳುವವರನ್ನು ಪಕ್ಕಕ್ಕೆ ತಳ್ಳಿ ಅರಸರಾಗಬಲ್ಲ ಸತ್ಯವನ್ನು ಹೇಳುತ್ತದೆ. ಕಂಬಾರರ ಬಹುತೇಕ ಕವಿತೆ, ನಾಟಕಗಳಲ್ಲಿನ ನಾಯಕರು ಹುಟ್ಟಿನಿಂದ ನಾಯಕರಾದವರಲ್ಲ. ಜನಸಮುದಾಯದ ನಡುವಿನಿಂದ ಬಂದವರು. ತಮ್ಮ ಸ್ವಪ್ರತಿಭೆ, ಪೌರುಷತನದಿಂದಾಗಿಯೇ ಪತನದ ಅಂಚಿಗೆ ಸಾಗುತ್ತಿರುವ ಅಧಿಕಾರದ ಕೇಂದ್ರವನ್ನು ಹಿಡಿದವರು. ನಿರ್ವೀರ್ಯವಾದ ವ್ಯವಸ್ಥೆಯೆದುರು ವೀರ್ಯವಂತರಾದ, ಜನಸಾಮಾನ್ಯರ ನಡುವಿನಿಂದ ಬಂದ ವ್ಯಕ್ತಿಗಳು. ಅಧಿಕಾರ ಕೇಂದ್ರದ ಗ್ರಹಣ ಮಾಡುವುದು ಕಂಬಾರರು ಪ್ರತಿಪಾದಿಸುವ ಹೊಸ ಸಮಾಜ ನಿರ್ಮಾಣದ ಕನಸಾಗಿದೆ. 'ಜೈಸಿದ ನಾಯಕ', 'ಜೋಕುಮಾರಸ್ವಾಮಿ' ಮತ್ತಿತರ ನಾಟಕಗಳಲ್ಲಿ ಕುಸಿದು ಹೋಗುತ್ತಿರುವ, ಜನಮನ್ನಣೆ ಕಳೆದುಕೊಂಡು ಕ್ರೌರ್ಯದಿಂದ ಜನರನ್ನು ಹಿಡಿತದಲ್ಲಿಟ್ಟುಕೊಂಡು ಸಿದ್ಧವ್ಯವಸ್ಥೆಗೆ ಎದುರಾಗುವ ಜನಸಮುದಾಯದ ನಾಯಕರು ಸೆಡ್ಡು ಹೊಡೆಯುತ್ತಾರೆ. ಇದು ಕಂಬಾರರು ಕಾಣುವ ಹೊಸ ಸಮಾಜದ ಕನಸು.

ಪ್ರಸ್ತುತ ಈ ಕವಿತೆ ಪ್ರಜಾಪ್ರಭುತ್ವದಲ್ಲಿ ಚಾಲಾಕಿತನವಿರುವ, ಆಕರ್ಷಕವಾದ ಕನಸುಗಳನ್ನು ಜನರ ಮುಂದಿಟ್ಟು ಮಾತನಾಡುವ, ಜನರನ್ನು ಓಲೈಸಿ ಹಿಡಿದಿಟ್ಟುಕೊಳ್ಳುವ, ಹುಸಿ ಭ್ರಮೆಗಳನ್ನು ಜನರಿಗೆ ಕಟ್ಟಿಕೊಟ್ಟು ಅದೇ ಸತ್ಯವೆಂದು ನಂಬಿಸುವ ಯಾವುದೇ ರಾಜಕಾರಣಿಯನ್ನು ಹೋಲುತ್ತದೆ. ನಿಜವಾದ ಅರಸುತನವನ್ನು ಪಕ್ಕಕ್ಕೆ ತಳ್ಳಿ ತಾವೇ ವಿಜೃಂಭಿಸುವ ಪಕ್ಕಾ ನಟರೂ ಕೂಡ ಇವರಾಗಿದ್ದಾರೆ. ಒಟ್ಟಾರೆ ಈ ಕವಿತೆ ಭ್ರಮೆಗಳನ್ನು ಹರಡುವ ಕೋಡಂಗಿಯ ಚಾಣಾಕ್ಷತೆ, ಭ್ರಮೆಗಳಲ್ಲಿ ಮುಳುಗಿ ತಮ್ಮತನ ಕಳಕೊಂಡ ಸಮುದಾಯದ ಮುಗ್ಧತೆ ಹಾಗೂ ಪೆದ್ದುತನವನ್ನು ಹಿಡಿದಿಡುತ್ತದೆ. ಇದೊಂದು ನಾಟಕವನ್ನು ಕುರಿತಾದ ಕವಿತೆಯಾದರೂ ವೇದಿಕೆಯ ಮೇಲೊಂದು ನಾಟಕ, ವೇದಿಕೆಯ ಕೆಳಗೊಂದು ನಾಟಕವನ್ನು ಏಕಕಾಲಕ್ಕೆ ಹಿಡಿದಿಡುತ್ತದೆ. ಸುಳ್ಳು ಸತ್ಯವಾಗುವ, ಸತ್ಯ ಸುಳ್ಳಾಗುವ ಮತ್ತು ಜನರನ್ನು ಅನಿವಾರ್ಯವಾದ ಗೊಂದಲದಲ್ಲಿ ನಿಲ್ಲಿಸಿದ ಕವಿತೆ. ಕಂಬಾರರು ತಮ್ಮ ಕವಿತೆ, ನಾಟಕಗಳ ಮೂಲಕ ಸೃಷ್ಟಿಸುವ ಜಗತ್ತು ಎಷ್ಟು ವಿಸ್ಮಯ, ರೋಮಾಂಚನಗಳಿಂದ ಕೂಡಿರುತ್ತದೆಂದರೆ ಒಮ್ಮೆ ಇದರ ಒಳ ಹೊಕ್ಕರೆ ಅದರಿಂದ ಬಿಡಿಸಿಕೊಂಡು ಹೊರಬರುವುದಕ್ಕೆ ಸಾಧ್ಯವಾಗುವುದಿಲ್ಲ. ಇದು ಕೇವಲ ಆಕೃತಿಯೊಳಗಿನ ದಾರಿತಪ್ಪಿಸುವ ಮೋಹಕತೆ ಮಾತ್ರವಾಗಿರದೆ ಮೋಹಕತೆಯನ್ನು ವಾಸ್ತವಿಕವಾಗಿಸುವ ಪ್ರಯತ್ನವೂ ಆಗಿರುತ್ತದೆ. ಹೀಗಾಗಿ ರಾಜನಾಗುವ, ರಾಜ ಕೋಡಂಗಿಯಾಗುವ ಚರಿತ್ರೆ ಹಾಗೂ ಚಮತ್ಕಾರ ಒಟ್ಟೊಟ್ಟಿಗೆ ಕವಿತೆಯಲ್ಲಿ ಬೆಸೆದು ಹಾಸು ಹೊಕ್ಕಾಗಿದೆ.

■ ಅಮೃತಮತಿ


ಓಂ ✝ ☪ ಸರ್ವೇಜನಃ ಸುಖಿನೋ ಭವಂತುಃ ಓಂ ✝ ☪
ಸಮಸ್ಯೆ ನಿಮ್ಮದು ಪರಿಹಾರ ನಮ್ಮದು

ಶ್ರೀ ಸಾಯಿಬಾಬ ಉಪಾಸಕರು
ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ
ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ
ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ
ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ
ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:
9620444460
ಖಾಯಂ ಮನೆ ವಿಳಾಸ: ಶ್ರೀಬಾಲಾಜಿ ಜ್ಯೋತಿಷ್ಯಂ
ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.
ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.